ಪಿಡಬ್ಲ್ಯೂ: 1 ಅಸಲು ದಾವೆ ನಂ.635/2023

**ದಿನಾಂಕ 04-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ-**

1. ಪ್ರತಿವಾದಿ ನಮ್ಮ ಹೊಲ ಒತ್ತುವರಿ ಮಾಡಿದ್ದಾರೆಂದು ಈ ದಾವೆ ಹಾಕಿದ್ದೇನೆ. ಪ್ರತಿವಾದಿಯ ಆಸ್ತಿಯನ್ನು ಪ್ರತಿವಾದಿಯ ಪೂರ್ವಜರು ಖರೀದಿ ಮಾಡಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ.

2. ದಾವಾ ಆಸ್ತಿ ಮೊದಲು ನನ್ನ ತಂದೆಯ ಆಸ್ತಿ. ದಾವಾ ಆಸ್ತಿಯನ್ನು ಮೊದಲು ನನ್ನ ಅಕ್ಕನ ಹೆಸರಿಗೆ ದಾನ ಕೊಟ್ಟಿದ್ದೆವು, ನಂತರ ನನ್ನ ಮಗ ಅದನ್ನು ಖರೀದಿ ಮಾಡಿರುತ್ತಾನೆ. ಯಾವ ವರ್ಷದಲ್ಲಿ ದಾನ ಕೊಟ್ಟಿದ್ದು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾನ ಪತ್ರ ಮಾಡಿಸಿ ಅಂದಾಜು 25-30 ವರ್ಷಗಳಾಗಿರಬಹುದು. ದಾನ ಕೊಡುವ ಕಾಲಕ್ಕೆ ಸರ್ವೆ ತುಂಬಿಸಿ, ನಕಾಶೆ ಮಾಡಿಸಿಲ್ಲ. ಆ ದಾನ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಆ ದಾನ ಪತ್ರದಲ್ಲಿರುವ ಚೆಕ್ ಬಂದಿ ನನಗೆ ಹೇಳಲು ಬರುತ್ತದೆ, ಪಶ್ಚಿಮಕ್ಕೆ ನಮ್ಮ ಹೊಲ, ಉತ್ತರಕ್ಕೆ ಅಮರೇಶರವರ ಹೊಲ, ಪೂರ್ವಕ್ಕೆ ಶಿವರುದ್ರಪ್ಪರವರ ಅಣ್ಣತಮ್ಮಂದಿರ ಹೊಲ, ದಕ್ಷಿಣಕ್ಕೆ ಹದ್ದಿಗೆರೆ ಅಮರೇಶ್ ರವರ ಹೊಲ ಇದೆ. ದಾನ ಪತ್ರದಲ್ಲಿ ಇದೇ ಚೆಕ್ ಬಂದಿ ಬರೆದುಕೊಟ್ಟಿದ್ದೆನು.

3. ಪ್ರತಿವಾದಿಯ ಆಸ್ತಿಯ ಸರ್ವೆ ನಂ.22. ಸದರಿ ಆಸ್ತಿ 12 ಎಕರೆ 36 ಗುಂಟೆ ವಿಸ್ತೀರ್ಣ ಎಂದರೆ ಸರಿ. ಸದರಿ ಆಸ್ತಿ 1966 ರಲ್ಲಿ ಪ್ರತಿವಾದಿಯ ಪೂರ್ವಜರು ಖರೀದಿ ಮಾಡಿದ್ದು ಎಂದರೆ ಸಾಕ್ಷಿಯು ಮಾಡಿರಬಹುದು ಎನ್ನುತ್ತಾರೆ. 1966 ರಿಂದ ಇಲ್ಲಿಯವರೆಗೂ ಅವರೇ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.